ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್‌ನಾಮೆ.

ತಾರೀಖು 25ನೆ ಜನವರಿ ಸ॥ 1907ನೆ ಇಸವಿ.

ನಂ. 10, ಕೊಡಗು ದೇಶದ ಕಿಗ್ಗಟ್ಟುನಾಡು ತಾಲ್ಲೂಕ್ ತಾವಲಗೆರಿ ಮೂರ್ನಾಡು ಕುರ್ಚಿ ಗ್ರಾಮದಲ್ಲಿ ಬರುವ ಮಹಾ ಶಿವರಾತ್ರಿ ಸಮಯದಲ್ಲಿ ನಡಿಯುವ ಇರುಪು ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಕೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವವ್ದರಿಂದ, ಸ॥ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸ॥ 1907ನೆ ಇಸವಿ ಫಿಬ್ರವರಿ 11 ಮತ್ತು 12ನೆ ತಾರೀಖುಗಳಲ್ಲಿ ಸದರೀ ಜಾತ್ರೆಗೆ ಮೈಸೂರು ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರೆನ್ನು ಹಿಂದಕ್ಕೆ ಕಳುಹಿಸಲಾದೀತು.

ಎಫ್. ಪಿ. ರೆನ್ನಿ,
ಚೀಫ್ ಕಮಿಷನರವರ ಸೆಕ್ರೆಟರಿಯವರು.

ತಾರೀಖು 6ನೆ ಫೆಬ್ರವರಿ 1907.

ನಂ. 6907—ಸ್ಯಾ. 129-06-4, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ವಿವರಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊಂದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭಿಸುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡು ಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು	
			ಇಂದ	ಗೆ
(1) ಮಲ್ಲೇಶ್ವರದೇವರ ಜಾತ್ರೆ.	ತೊಗ್ಗರ್ಸಿ ...	ಶಿಕಾರಿಪುರ ...	22—2—07	28—2—07
(2) ಕೇತಾರೇಶ್ವರ ದೇವರ ಜಾತ್ರೆ.	ಬಿಳಗಾವಿ ...	ಡಿಟೋ ...	2—3—07	8—3—07

1897ನೆ ವರ್ಷದ 2ನೆ ನಂಬರ್ ಎಪಿಡೆಮಿಕ್ ಡಿಸೀಸೆಸ್ ಎಂಬ ಅಂಟುರೋಗಗಳ ಸಂಬಂಧವಾದ ರೆಗ್ಯುಲೇಷನಿನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಪ್ರತಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 6ನೆ ಫೆಬ್ರವರಿ 1907.

ನಂ. 6909—ಸ್ಯಾನಿಟೆರಿ 21-06—7, ಈ ಕೆಳಗೆ ನಮೂದಿಸುವ ಜಾತ್ರೆಗೆ ಜನರು ಹೋಗುವದನ್ನು ಮದರಾಸು ಸರ್ಕಾರದವರು ನಿಷೇಧಿಸಿರುತ್ತಾರೆಂದು ಇದರಿಂದ ಸರ್ವಸ್ಸರ ತಿಳಿವಳಿಕೆಯ ಬಗ್ಗೆ ಪ್ರಕಟಿಸಿದೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು		ಅಧಿಕಾರ.
				ಇಂದ.	ಗೆ.	
ಶ್ರೀ ಬಸವೇಶ್ವರಸ್ವಾಮಿಯ ರಥೋತ್ಸವ.	ಕೊಟ್ಟೂರು	ಕೂಡ್ಲಗಿ ...	ಬಳ್ಳಾರಿ	1—2—07	12—2—07	ಮೈಸೂರು ರೆಸಿಡೆಂಟರವರ ಮೊದಲನೆ ಅಸಿಸ್ಟೆಂಟರವರ್ 1907ನೆ ಇಸವಿ ಜನವರಿ 30ನೆ ತಾರೀಖಿನ ಪಿ. 76ನೆ ನಂಬರ್ ಇಂಡೆಂಟ್ಸ್‌ವರ್ಮೆಂಟ್.
				ಉಭಯ ದಿನಗಳೂ ಸೇರಿ.		